ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

3

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 12/12/20

# ಸಭಾಪತಿಯ ಪದಚ್ಯುತಿಗೆ ಯತ್ನ

## ಡಿ.15ಕ್ಕೆ ಪುನಃ ಮೇಲ್ಮನೆ ಕಲಾಪ | ಸ್ಪೀಕರ್ ವಿರುದ್ಧ ಅವಿಶ್ವಾಸ ನಿರ್ಣಯ ಸಾಧ್ಯತೆ

■ ವಿಕ ಸುದ್ದಿಲೋಕ ಬೆಂಗಳೂರು



ವಿಧಾನ ಪರಿಷತ್ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ ಸಭಾಪತಿ ಕ್ರಮದ ವಿರುದ್ಧ ಬಿಜೆಪಿ ನಿಯೋಗ ರಾಜ್ಯಪಾಲರಿಗೆ ದೂರು ನೀಡಿದೆ. ಜತೆಗೆ ಕಲಾಪ ಸಲಹಾ ಸಮಿತಿ(ಬಿಎಸಿ) ಸಭೆ ನಿರ್ಣಯದಂತೆ ಮೇಲ್ಮನೆ ಕಲಾಪವನ್ನು ಪುನಃ ನಡೆಸುವಂತೆ ಸಂಸದೀಯ ವ್ಯವಹಾರಗಳ ಇಲಾಖೆಯಿಂದ ವಿಧಾನ ಪರಿಷತ್ ಕಾರ್ಯದರ್ಶಿಗೆ ಪತ್ರ ಬರೆಯಲಾಗಿದೆ. ಹಾಗಾಗಿ ಬರುವ ಮಂಗಳವಾರ (ಡಿ.15) ಪರಿಷತ್ ಕಲಾಪ ನಡೆಯುವುದು ಬಹುತೇಕ ಖಚಿತವಾಗಿದ್ದು, ಸಭಾಪತಿ ಪ್ರತಾಪ್‌ಚಂದ್ರ ಶೆಟ್ಟಿ ಭವಿಷ್ಯವೇನು ಎನ್ನುವುದೂ ನಿರ್ಧಾರವಾಗಲಿದೆ.

ಸಭಾಪತಿ ಪ್ರತಾಪ್‌ಚಂದ್ರ ಶೆಟ್ಟಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ಕೋರಿ ಆಡಳಿತಾರೂಢ ಬಿಜೆಪಿ ಈ ಮೊದಲೇ ನೋಟಿಸ್ ನೀಡಿದೆ. ಇದು ಇತ್ಯರ್ಥಗೊಳ್ಳುವ ಮುನ್ನವೇ ಪರಿಷತ್ ಕಲಾಪ ಮೊಟಕಾಗಿದೆ. ಜತೆಗೆ ಬಿಜೆಪಿಗೆ ಅತ್ಯಂತ ಪ್ರಮುಖವಾಗಿರುವ ಗೋಹತ್ಯೆ ನಿಷೇಧ ಸಂಬಂಧಿತ 'ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ-2020' ಅನ್ನು ಪರಿಷತ್‌ನಲ್ಲಿ ಮಂಡಿಸಲು ಸಾಧ್ಯವಾಗಿಲ್ಲ. ಈ ಅಂಶವೂ ಸಭಾಪತಿ ವಿರುದ್ಧ ಬಿಜೆಪಿ ಸಿಟ್ಟು ನಿಲ್ಲಲು ಕಾರಣವಾಗಿದೆ.

ಈ ಹಿನ್ನೆಲೆಯಲ್ಲಿ ರಾಜ್ಯಪಾಲರನ್ನು ಶುಕ್ರವಾರ ಭೇಟಿಯಾದ ಪರಿಷತ್ ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ ನೇತೃತ್ವದ ಬಿಜೆಪಿ ನಿಯೋಗ ಸಭಾಪತಿ ವಿರುದ್ಧ ದೂರು ನೀಡಿದೆ. ಪುನಃ ಅಧಿವೇಶನ ನಡೆಸುವಂತೆ ನಿರ್ದೇಶಿಸುವಂತೆಯೂ ಕೋರಿಕೊಂಡಿದೆ. ಇದರ ಬೆನ್ನಿಗೇ ಸಂಸದೀಯ ವ್ಯವಹಾರಗಳ ಇಲಾಖೆಯಿಂದ ಪರಿಷತ್ ಕಾರ್ಯದರ್ಶಿಗೆ ಪತ್ರ ಬರೆಯಲಾಗಿದೆ. ಹಾಗಾಗಿ ಪುನಃ ಪರಿಷತ್ ಕಲಾಪ ನಡೆಸುವುದು ಅನಿವಾರ್ಯವಾಗಲಿದೆ. ಇಲ್ಲದಿದ್ದರೆ ಸಭಾಪತಿ ವಿರುದ್ಧದ ದೂರನ್ನು ರಾಜ್ಯಪಾಲರು ಗಂಭೀರವಾಗಿ ಪರಿಗಣಿಸುವ ಸಾಧ್ಯತೆ ಇರುತ್ತದೆ ಎಂದು ತಜ್ಞರು ಹೇಳುತ್ತಾರೆ.

ರಾಜ್ಯಪಾಲರನ್ನು ಭೇಟಿಯಾದ ಬಿಜೆಪಿ ನಿಯೋಗದಲ್ಲಿ ಸಚಿವ ಕೋಟ ಶ್ರೀನಿವಾಸ ಪೂಜಾರಿ ಸೇರಿದಂತೆ ಆಡಳಿತ ಪಕ್ಷದ ಮುಖ್ಯ ಸಚೇತಕ ಮಹಾಂತೇಶ ಕವಟಗಿಮಠ, ಸದಸ್ಯರಾದ ಎನ್.ರವಿಕುಮಾರ್, ಆಯನೂರು ಮಂಜುನಾಥ್, ಅರುಣ್ ಶಹಾಪುರ, ತೇಜಸ್ವಿನಿಗೌಡ ಇದ್ದರು. ಇದಕ್ಕೂ ಮುನ್ನ ಬಿಜೆಪಿ ಸದಸ್ಯರು ಕೋಟ ನೇತೃತ್ವದಲ್ಲಿ ಸಭೆ ನಡೆಸಿದ್ದರು.

# ವಿಧಾನ ಪರಿಷತ್ ಸಭಾಪತಿ ಪದಚ್ಯುತಿ ಯತ್ನ

» ಮೊದಲ ಪುಟದಿಂದ ವಿ.ಕ 12/12/20

ಬಿಎಸಿಯಂತೆ ನಡೆದುಕೊಂಡಿಲ್ಲ; ಈ ತಿಂಗಳ 15ರ ವರೆಗೆ ಪರಿಷತ್ ಕಲಾಪ ನಡೆಸಲು ಕಲಾಪ ಸಲಹಾ ಸಮಿತಿ(ಬಿಎಸಿ) ಸಭೆಯಲ್ಲಿ ನಿರ್ಧಾರವಾಗಿತ್ತು. ಆದರೆ, ಸಭಾಪತಿ ಅವರು ಸರಕಾರದ ಸಹಮತವಿಲ್ಲದೆ ಕಲಾಪವನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಿದ್ದಾರೆ. ಸಭಾಪತಿ ವಿರುದ್ಧದ ಅವಿಶ್ವಾಸ ನಿರ್ಣಯದ ಸೂಚನೆಯ ಮೇಲಿನ ಚರ್ಚೆಯೂ ಬಾಕಿಯಿದೆ. ಈ ವಿಚಾರವನ್ನು ರಾಜ್ಯಪಾಲರ ಗಮನಕ್ಕೆ ತರಲಾಗಿದೆ. ಇಂತಹ ಸಂದರ್ಭದಲ್ಲಿ ಪುನಃ ಕಲಾಪ ನಡೆಸಲು ಅವಕಾಶ ಇರುವುದಾಗಿ ಕಾನೂನು ತಜ್ಞರ ಅಭಿಪ್ರಾಯವನ್ನೂ ಪಡೆಯಲಾಗಿದೆ ಎಂದು ಮೇಲ್ಮನೆ ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

ಈ ಮಧ್ಯೆ, ಸಿಎಂ ಬಿ.ಎಸ್.ಯಡಿಯೂರಪ್ಪ ಅವರೂ ಮಂಗಳವಾರ ಪುನಃ ಪರಿಷತ್ ಕಲಾಪ ನಡೆಸಲಾಗುತ್ತದೆ. ಈ ಸಂಬಂಧ ರಾಜ್ಯಪಾಲರ ಗಮನಕ್ಕೂ ತರಲಾಗಿದೆ. ಕಲಾಪವನ್ನು ಅಸಮರ್ಪಕವಾಗಿ ಮುಂದೂಡುವ ಅಧಿಕಾರ ಸಭಾಪತಿ ಅವರಿಗೂ ಇರುವುದಿಲ್ಲ ಎಂದು ಹೇಳಿದ್ದಾರೆ.

**ಅವಿಶ್ವಾಸ ಚರ್ಚೆಯಾಗಲಿ**

ಸರಕಾರ ನಿಗದಿ ಮಾಡಿದಂತೆ ಹಾಗೂ ಕಲಾಪ ಸಲಹಾ ಸಮಿತಿ(ಬಿಎಸಿ) ಸಭೆಯ ತೀರ್ಮಾನದಂತೆ ಡಿಸೆಂಬರ್ 15ರ ವರೆಗೆ ಕಲಾಪ ಮುಂದುವರಿಯಬೇಕು. ಆದರೆ, ಸಭಾಪತಿ ಅವರು ಇದಕ್ಕೆ ಅನುವು ಮಾಡಿಕೊಟ್ಟಿಲ್ಲ. ಹಾಗಾಗಿ ಕಲಾಪ ಮುಂದುವರಿಸಲು ಸೂಚಿಸುವಂತೆ ಸರಕಾರದಿಂದ ನಿರ್ದೇಶಿತನಾಗಿದ್ದೇನೆ. ಒಂದು ವೇಳೆ ಪರಿಷತ್ ಸದಸ್ಯರು ಈಗಾಗಲೇ ದೂರದ ಊರುಗಳಿಗೆ ಹೋಗಿದ್ದರೆ ಡಿಸೆಂಬರ್ 15ರಂದು 11 ಗಂಟೆಗೆ ಕಲಾಪ ಸಮಾವೇಶಗೊಳ್ಳುವಂತೆ ಮಾಡಬೇಕು.

ಜತೆಗೆ ಸಭಾಪತಿ ವಿರುದ್ಧದ ಅವಿಶ್ವಾಸ ನಿರ್ಣಯದ ಸೂಚನೆಯ ಮೇಲಿನ ಚರ್ಚೆಗೆ ಅನುವು ಮಾಡಿಕೊಡಬೇಕು. ಇತರ ಸರಕಾರಿ ಕಾರ್ಯಕಲಾಪ ನಡೆಸುವುದಕ್ಕೂ ಅವಕಾಶ ನೀಡಬೇಕು. ಈ ಸಂಬಂಧ ಸಭೆ ಕರೆಯುವಂತೆ ಕೋರಲು ಸರಕಾರದಿಂದ ನಿರ್ದೇಶಿತನಾಗಿದ್ದೇನೆ,'' ಎಂದು ಸಂಸದೀಯ ವ್ಯವಹಾರಗಳ ಇಲಾಖೆ ಕಾರ್ಯದರ್ಶಿ ಕೆ.ದ್ವಾರಕಾನಾಥ್ ಬಾಬು ಪರಿಷತ್ ಕಾರ್ಯದರ್ಶಿ ಅವರಿಗೆ ಬರೆದ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.